**ಮೂ.ದಾ.ನಂ.58/2018**

ಪಿ.ಡಬ್ಲ್ಯು 1

(ಇಂದು ದಿನಾಂಕ: **04-08-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ.ಡಿ.ಎಸ್.ಭಟ್ಟ. ವಕೀಲರಿಂದಃ**

ಸರ್ವೆ ನಂಬರ 1506 ಹಿಸ್ಸಾ 2 ನ್ನು ನನ್ನ ಅಣ್ಣನಿಂದ ಯಾವ ವರ್ಷ ಖರೀದಿ ಮಾಡಿದ್ದೇನೆ ಎಂದರೆ ಸಾಕ್ಷಿಯು ಸುಮಾರು 12 ವರ್ಷಗಳ ಹಿಂದೆ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಅಣ್ಣ ಖರೀದಿ ಮಾಡಿದಂತಹ ದಸ್ತಾವೇಜು ಹಾಗೂ ನಂತರದಲ್ಲಿ ನಾನು ನನ್ನ ಅಣ್ಣನಿಂದ ಖರೀದಿ ಮಾಡಿದ ದಸ್ತಾವೇಜುಗಳು ನನ್ನ ತಾಬಾ ಇದೆ. ಸದ್ರಿ ಎರಡೂ ದಸ್ತಾವೇಜಗಳಲ್ಲಿ ಖರೀದಿ ಮಾಡಿದ ಆಸ್ತಿಗಳ ಚತುರ್ಗಡಿಯನ್ನು ಸರಿಯಾಗಿ ನಮೂದು ಮಾಡಿದ್ದೇವೆ ಎಂದರೆ ಸರಿ. ನಾನು ಈ ದಾವೆಯಲ್ಲಿ ನನ್ನ ಅಣ್ಣ ಖರೀದಿ ಮಾಡಿದ ದಸ್ತಾವೇಜ ಹಾಗೂ ನಾನು ಖರೀದಿ ಮಾಡಿದ ದಸ್ತಾವೇಜುಗಳ ಮೂಲ ಪ್ರತಿ ಅಥವಾ ಯಥಾ ನಕಲನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದ್ರಿ ದಸ್ತಾವೇಜುಗಳನ್ನು ನನಗೆ ಈ ಪ್ರಕರಣದಲ್ಲಿ ತಂದು ನನಗೆ ಹಾಜರು ಮಾಡಲು ಯಾವುದೇ ತೊಂದರೆ ಇರುವುದಿಲ್ಲ.

ನಾನು ನನ್ನ ಅಣ್ಣನಿಗೆ ರೂ.50 ಸಾವಿರ ಚಿಲ್ಲರೆ ಹಣವನ್ನು ನೀಡಿ ಸದ್ರಿ ಜಾಗವನ್ನು ಖರೀದಿ ಮಾಡಿರುತ್ತೇನೆ. ನನ್ನ ಅಣ್ಣನು ಎಷ್ಟು ಹಣವನ್ನು ನೀಡಿ ಜಾಗವನ್ನು ಖರೀದಿ ಮಾಡಿದ್ದಾನೆ ಎಂಬ ಬಗ್ಗೆ ನನಗೆ ತಿಳಿದಿಲ್ಲ.

ಸರ್ವೆ ನಂಬರ 1505/2 8 ಗುಂಟೆಗೆ ಒಪ್ಪಿದ ಸ್ಥಳವು ಪ್ರತಿವಾದಿಯ ಹಕ್ಕಿನ ಸ್ಥಳ ಎಂದರೆ ಸರಿ. ನಾನು ಖರೀದಿ ಮಾಡಿದ ಸರ್ವೆ ನಂಬರದಲ್ಲಿ ನಾನು ಖರೀದಿಸುವ ಸಂದರ್ಭದಲ್ಲಿ ಒಂದು ಕಚ್ಚಾ ಮನೆ ಇತ್ತು. ಸದಿ ಸಂದರ್ಭದಲ್ಲಿ ಆ ಮನೆಯು ನನ್ನ ಅಣ್ಣನ ಹೆಸರಿಗೆ ಇತ್ತು. ಸದ್ರಿ ಕಚ್ಚಾ ಮನೆಯನ್ನು ನನ್ನ

ಅಣ್ಣನು ಖರೀದಿ ಮಾಡಿದ ನಂತರದಲ್ಲಿ ಕಟ್ಟಿರುತ್ತಾನೆ. ಅಂದರೆ ನನ್ನ ಅಣ್ಣ ಖುಲ್ಲಾ ಜಾಗೆಯನ್ನು ಖರೀದಿ ಮಾಡಿರುತ್ತಾನೆ. ಸದ್ರಿ ಕಚ್ಚಾ ಮನೆಗೆ ಪಂಚಾಯತ ನಂಬರ ಎಷ್ಟು ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಖರೀದಿಸಿದ ನಂತರದಲ್ಲಿ ನನ್ನ ವಾಸ್ತವ್ಯಕ್ಕಾಗಿ ಸದ್ರಿ ಮನೆಯನ್ನು ಕಟ್ಟಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಯು ಪುನಃ ಮುಂದುವರಿದು ತದನಂತರ ಮೀನುಗಾರಿಕೆ ಇಲಾಖೆಯಿಂದ ಮನೆ ಕಟ್ಟಲು ನನಗೆ ಸಹಾಯ ಧನ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ.

ನಾನು ಕಟ್ಟಿಕೊಂಡ ಮನೆಗೆ ಪಂಚಾಯತದಿಂದ ಕೊಟ್ಟ ಮನೆ ನಂಬರ ನನಗೆ ಗೊತ್ತಿಲ್ಲ. ಸದ್ರಿ ಮನೆಗೆ ಸಂಬಂಧಿಸಿದಂತಹ ಎಲ್ಲಾ ದಾಖಲಾತಿಗಳು ನನ್ನ ತಾಬಾ ಇದೆ. ಸದ್ರಿ ದಾಖಲಾತಿಗಳು ನಾನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಅವುಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ